ದಿನಾಂಕ 24.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ವಾದಿ ಪರವಾಗಿ ಶ್ರೀ.ಎಸ್.ಕೆ ವಕೀಲರಿಂದಃ

4. ನಾಲ್ಕನೇ ಪ್ರತಿವಾದಿಯ ಮದುವೆ ಯಾವಾಗ ಆಗಿದೆ ಎಂದರೆ ಇಸವಿ ನೆನಪಿಲ್ಲ. ಅವರ ಮದುವೆ 1995 ರಲ್ಲಿ ಆಗಿದೆ ಎಂದರೆ ಮರೆತಿದ್ದೇನೆ. ನಾಲ್ಕನೇ ಪ್ರತಿವಾದಿಯ ಮಗ ಸೇತು ಸಾಕೇತ್ ಯಾವಾಗ ಜನಿಸಿದರು ಗೊತ್ತಾ ಎಂದರೆ 2000 ಇಸವಿಯಲ್ಲಿ ಜನಿಸಿದರು. ನಿ.ಡಿ 3 ರ ಪುಟಸಂಖ್ಯೆ 13 ರಲ್ಲಿ ನಾಲ್ಕನೇ ಪ್ರತಿವಾದಿಯ ಮಗ ಸೇತುರವರ ಸಹಿ ಇದೆ ಎಂದರೆ ಹೌದು. ನಿ.ಡಿ 3 ನ್ನು 17.06.2013 ರಲ್ಲಿ ಮಾಡಲಾಗಿದೆ ಎಂದರೆ ಹೌದು. ನಿ.ಡಿ 3 ನ್ನು ಮಾಡುವ ವೇಳೆಗೆ ಸೇತು ಸಾಕೇತ್ ರವರಿಗೆ 13 ವರ್ಷ ವಯಸ್ಸಾಗಿತ್ತು ನೀವು ಅವರ ಸಹಿಯನ್ನು ಪಡೆದಿದ್ದೀರಿ ಎಂದರೆ ನಾನು ತೆಗೆದುಕೊಂಡಿಲ್ಲ ನನ್ನ ಮಾವನವರು ಮಾಡಿಸಿದ್ದಾರೆ. ನಿ.ಡಿ 3 ನ್ನು ನನ್ನ ಮತ್ತು ನನ್ನ ಹೆಂಡತಿಯ ಒತ್ತಾಯದ ಮೇರೆಗೆ 1ನೇ ಪ್ರತಿವಾದಿ ನಾರಾಯಣಗೌಡ ಮಾಡಿಸಿಕೊಟ್ಟಿದ್ದಾರೆ  ಎಂದರೆ ಸುಳ್ಳು. ನಿ.ಡಿ 4 ನ್ನು 1ನೇ ಪ್ರತಿವಾದಿ ನನ್ನ ಹೆಂಡತಿಗೆ ಬರೆದುಕೊಟ್ಟ ದಾನ ಪತ್ರ ಎಂದರೆ ಹೌದು. ನಿ.ಡಿ 3 ರಲ್ಲಿ ಮಾತ್ರ ಕುಟುಂಬ ಸದಸ್ಯರ ಸಹಿಗಳಿದ್ದು, ನಿ.ಡಿ 4 ರಲ್ಲಿ ಯಾವುದೇ ಕುಟುಂಬ ಸದಸ್ಯರ ಸಹಿಗಳಿರುವುದಿಲ್ಲ ಎಂದರೆ ಹೌದು. ಅದಕ್ಕೆ ಏನು ಕಾರಣ ಎಂದರೆ ನನಗೆ ಗೊತ್ತಿಲ್ಲ. ಅವರು ಕರೆದುಕೊಂಡು ಬಂದು ಮಾಡಿಸಿದ್ದಾರೆ.

5. ನಿ.ಡಿ 3 ಮತ್ತು ನಿ.ಡಿ 4 ರಿಂದ ನನ್ನ ಹೆಂಡತಿಗೆ ಬಂದ ಆಸ್ತಿಗಳು 1ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸುಳ್ಳು. ಆ ಆಸ್ತಿಗಳು  1ನೇ ಪ್ರತಿವಾದಿಗೆ ಹೇಗೆ ಬಂದಿದೆ ಎಂದರೆ 1ನೇ ಪ್ರತಿವಾದಿಯ 3 ಜನ ಅಣ್ಣ ತಮ್ಮಂದಿರು ತಮ್ಮೊಳಗೆ ವಿಭಾಗ ಮಾಡಿಕೊಂಡಿದ್ದಾರೆ. ಅದು ಯಾವಾಗ ವಿಭಾಗ ಆಗಿದೆಯಾ ಎಂದು ಹೇಳಬಹುದಾ ಎಂದರೆ 1993 ರಲ್ಲಿ ಆಗಿದೆ. ಆ ವಿಭಾಗ ಪತ್ರ ನಿ.ಡಿ 1 ಎಂದರೆ ಹೌದು. ನಿ.ಡಿ 1 ರಲ್ಲಿರುವ ಅಂಶಗಳನ್ನು ತಾವು ಒಪ್ಪುತ್ತೀರಾ ಎಂದರೆ ಹೌದು. ಅಣ್ಣ ತಮ್ಮಂದಿರು ತಮ್ಮೊಳಗೆ ಭಾಗ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಅದು ಅವರ ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿ ವಿಭಾಗ ಮಾಡಿಕೊಳ್ಳುವವರೆಗೆ ಹೌದು. ವಿಭಾಗ ಆದ ನಂತರ ಇಲ್ಲ. ನಿ.ಡಿ 1 ರ ಆಧಾರದ ಮೇಲೆ ದಾವಾ ಸ್ವತ್ತು 1ನೇ ಪ್ರತಿವಾದಿಗೆ ಬಂದಿದೆ ಎಂದರೆ ವಿಭಾಗದ ಮೂಲಕ 1ನೇ ಪ್ರತಿವಾದಿಗೆ ಬಂದಿದೆ.

6. ನಿ.ಡಿ 3 ರ 2ನೇ ಪುಟದಲ್ಲಿ ವಿಭಾಗ ಪತ್ರದ 'ಎ' ಷೆಡ್ಯೂಲ್ ಸ್ವತ್ತು ನನಗೆ ಮತ್ತು ನನ್ನ ಮಕ್ಕಳಾದ ವಾದಿ ಮತ್ತು 3 ಮತ್ತು 4 ನೇ ಪ್ರತಿವಾದಿ ಮತ್ತು ನನ್ನ ಹೆಂಡತಿ 2ನೇ ಪ್ರತಿವಾದಿಗೆ ಸೇರತಕ್ಕದ್ದು ಎಂದು ಒಕ್ಕಣೆ ಇದೆ ಎಂದರೆ ಹೌದು. ನಿ.ಡಿ 1 ರ ಪುಟ ಸಂಖ್ಯೆ 1 ರಲ್ಲಿ ನನಗೆ 04.03.1936 ರಲ್ಲಿ ಆದ ನೋಂದಾಯಿತ ಹಕ್ಕು ನಿವೃತ್ತಿ ಪತ್ರದಿಂದ ಬಂದ ಎಲ್ಲಾ ಆಸ್ತಿಗಳು ನನ್ನ ತಂದೆ ಕಂಚಿಗೌದ ಉ ತಮ್ಮಣ್ಣಗೌಡರಿಂದ ಬಂದ ಆಸ್ತಿಗಳು ಎಂದು ಬರೆದಿದ್ದಾರೆ ಎಂದರೆ ಹೌದು. ಆಗಾಗಿ ನಿ.ಡಿ 1 , 3 ಮತ್ತು 4 ಹಾಗೂ ದಾವಾಸ್ವತ್ತುಗಳಲ್ಲಿ ವಾದಿಗೆ ಮತ್ತು ಪ್ರತಿವಾದಿ 2 ರಿಂದ 4 ರವರಿಗೆ ಹಕ್ಕು ಇದೆ ಎಂದರೆ ಸುಳ್ಳು. ಆ ರೀತಿ ಹಕ್ಕು ಇರುವುದರಿಂದ 1ನೇ ಪ್ರತಿವಾದಿ ಅವರ ಬೇಕಾದವರಿಗೆ ದಾನ ಪತ್ರ ಬರೆದುಕೊಡುವ ಅಥವಾ ವಿಲೇವಾರಿ ಮಾಡುವ ಯಾವುದೇ ಹಕ್ಕು ಇಲ್ಲ ಎಂದರೆ ಸುಳ್ಳು.

7. ನಿ.ಡಿ 1 ಪುಟ ಸಂಖ್ಯೆ 4 ರಲ್ಲಿ ನಮೂದಿಸಿರುವಂತೆ ತಮಗೆ ವಿಭಾಗ ಪತ್ರದಿಂದ ಬಂದ 'ಎ' ಷೆಡ್ಯೂಲ್ ಸ್ವತ್ತುಗಳಲ್ಲಿ ನನಗೆ ಮತ್ತು ವಾದಿ ಹಾಗೂ 2 ರಿಂದ 4ನೇ ಪ್ರತಿವಾದಿಯವರಿಗೆ ಹಕ್ಕು ಇದೆ ಎಂದು ಬರೆದಿದ್ದಾರೆ ಎಂದರೆ ಹೌದು. ಅದೇ ರೀತಿ ಪುಟಸಂಖ್ಯೆ 4 ರ 2ನೇ ಖಂಡಿಕೆಯಲ್ಲಿ 1ನೇ ಪ್ರತಿವಾದಿ ಮತ್ತು ಮಕ್ಕಳಿಗೆ 60 X 40 ಅಡಿಯ ನಿವೇಶನಗಳು ಎಲ್ಲರಿಗೂ ನೀಡಲಾಗಿದೆ ಎಂದು ಬರೆದಿದ್ದಾರೆ ಎಂದರೆ ಹೌದು. ಅದೇ ರೀತಿ ನಾರಾಯಣಗೌಡರ ತಮ್ಮಂದಿರಾದ ರಾಮಚಂದ್ರ ಮತ್ತು ಶಶಿಕುಮಾರ ರವರ ಮಕ್ಕಳಿಗೂ ಸಹ 60 X 40 ಅಡಿ ನಿವೇಶನಗಳನ್ನು ' ಬಿ ' ಮತ್ತು 'ಸಿ' ಅನುಸೂಚಿಗಳಂತೆ ನೀಡಲಾಗಿದೆ ಎಂದರೆ ಹೌದು. ನಿ.ಡಿ 1 ಕ್ಕೆ 1ನೇ ಪ್ರತಿವಾದಿಯ ತಾಯಿಯ ಒಪ್ಪಿ ಗೆ ಇದ್ದು ಅವರು ಕೂಡ ಸಹಿ ಮಾಡಿದ್ದಾರೆ ಎಂದರೆ ಸಹಿ ಇದೆ. ಅದೇ ರೀತಿ ನಿ.ಡಿ 1 ರಲ್ಲಿ 'ಡಿ' ಷೆಡ್ಯೂಲ್ ಸ್ವತ್ತನ್ನು 1ನೇ ಪ್ರತಿವಾದಿಯ ತಾಯಿ ತಾಯಮ್ಮರವರು ಮೃತಪಟ್ಟ ನಂತರ ಆ ಸ್ವತ್ತುಗಳನ್ನು ಅವರ ಗಂಡು ಮಕ್ಕಳು ಸಮವಾಗಿ ಅಂಚಿಕೊಳ್ಳಬೇಕೆಂದು ಉಲ್ಲೇಖಿಸಿದ್ದಾರೆ ಎಂದರೆ ಹೌದು. ನಿ.ಡಿ 1 ರನ್ನು ಯಾರು ಕೊಟ್ಟಿದ್ದಾರೆ ಎಂದರೆ 1ನೇ ಪ್ರತಿವಾದಿ ಕೊಟ್ಟಿದ್ದಾರೆ.

8. ದಾವಾ ಸ್ವತ್ತುಗಳನ್ನು 1ನೇ ಪ್ರತಿವಾದಿ 2 ದಾನ ಪತ್ರಗಳ ಮೂಲಕ ನನ್ನ ಹೆಂಡತಿಗೆ ಕೊಟ್ಟಿದ್ದಾರೆ ಎಂದರೆ ಹೌದು. 1ನೇ ಪ್ರತಿವಾದಿ ನಿಮ್ಮ ಹೆಂಡತಿಗೆ ಮಾತ್ರ 1 ಎಕರೆ 7 ಗುಂಟೆ ಸ್ವತ್ತನ್ನು ಮಾತ್ರ ಯಾಕೆ ಕೊಟ್ಟಿದ್ದಾರೆ ಎಂದು ಹೇಳಬಹುದಾ ಎಂದರೆ ಪ್ರೀತಿ ಮತ್ತು ವಿಶ್ವಾಸದಿಂದ ಕೊಟ್ಟಿದ್ದಾರೆ. 1ನೇ ಪ್ರತಿವಾದಿಗೆ ಉಳಿದ ಹೆಣ್ಣು ಮಕ್ಕಳ ಮೇಲೆ ಪ್ರೀತಿ ವಾತ್ಸಲ್ಯ ಇರಲಿಲ್ಲ ಎಂದರೆ ಎಲ್ಲ ಮಕ್ಕಳು ಒಂದೇ.

9. 2ನೇ ಪ್ರತಿವಾದಿ 3ನೇ ಪ್ರತಿವಾದಿಯ ವಿರುದ್ದ ಬೆಂಗಳೂರಿನ Parent and senior citizen welfare tribunal ನಲ್ಲಿ ಹಾಕಿರುವ ಪ್ರಕರಣದ ಬಗ್ಗೆ ತಮಗೆ ಮಾಹಿತಿ ಇದೆಯಾ ಎಂದರೆ ಹೌದು. ಸಾಕ್ಷಿಗೆ ಸದರಿ tribunal ನ ಆದೇಶ ಮತ್ತು ಲಿಖಿತ ಹೇಳಿಕೆಯ ದೃಡಿಕೃತ ನಕಲನ್ನು ತೋರಿಸಿ ಸದರಿ ದಾಖಲೆಗಳನ್ನು ತೋರಿಸಿ ಸಾಕ್ಷಿ ಒಪ್ಪಿದ ಮೇರೆ ಅವುಗಳನ್ನು ನಿ.ಪಿ 14 ಮತ್ತು 15 ಎಂದು ಸಾಕ್ಷಿ ಮೂಲಕ ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಿ ಸದರಿ ಅರ್ಜಿ 2ನೇ ಪ್ರತಿವಾದಿ 3ನೇ ಪ್ರತಿವಾದಿಯ ವಿರುದ್ದ ದಾಖಲು ಮಾಡಿದ ಅರ್ಜಿ ಎಂದು ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ಒಪ್ಪಿದ ಮೇರೆ ಸದರಿ ದಾಖಲೆಯ ದೃಡಿಕೃತ ನಕಲನ್ನು ನಿ.ಪಿ 16 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು 2ನೇಪ್ರತಿವಾದಿಗೆ ಏನು ಗೊತ್ತಾಗುವುದಿಲ್ಲ. ವಾದಿಯೇ ಎಲ್ಲವನ್ನು ಮಾಡಿದ್ದಾರೆ. ಅಕ್ಕ ತಂಗಿಯರ ನಡುವೆ ವಿವಾದ ಇದ್ದ ಕಾರಣ ಅವರಿಗೆ ಗೊತ್ತಿಲ್ಲದೆ ಮಾಡಿದ್ದಾರೆ. ಸದರಿ ವಿಚಾರವನ್ನು ತಮ್ಮ ಲಿಖಿತ ಹೇಳಿಕೆಯಲ್ಲಿ ಆ ಪ್ರಕರಣದಲ್ಲಿ 3ನೇ ಪ್ರತಿವಾದಿ ತಿಳಿಸಿದ್ದಾರೆ ಎಂದರೆ ಇರಬಹುದು ನನಗೆ ನೆನಪಿಲ್ಲ. ಅದು ಈಗಾಗಲೇ ರಾಜಿ ಆಗಿ ಮುಕ್ತಾಯಗೊಂಡಿರುತ್ತದೆ. ಯಾವ ವಿಷಯದಲ್ಲಿ ರಾಜಿ ಆಗಿದೆ ಎಂದರೆ Lift ನ ವಿಚಾರವಾಗಿ ಆಗಿದ್ದು ಅದನ್ನು ಈಗಾಗಲೇ ಸರಿಪಡಿಸಿಕೊಂಡಿದ್ದಾರೆ.

10. Lift ನ ವಿಚಾರದಲ್ಲಿ ಒಪ್ಪಿ ಕೊಂಡಂತ ಹಣವನ್ನು ವಾದಿಗೆ ಕೊಟ್ಟಿದ್ದಾರೆ ಎಂದರೆ ಎಲ್ಲವನ್ನು ಕೊಟ್ಟಿದ್ದೇವೆ. ಒಪ್ಪಂದದ ಪ್ರಕಾರ 8 ಲಕ್ಷ ಕೊಡಬೇಕಾಗಿತ್ತು ಆದರೆ ನಾವು 5 ಲಕ್ಷ ಕೊಟ್ಟಿದ್ದೇವೆ ಎಂದರೆ ಸುಳ್ಳು. 2ನೇ ಪ್ರತಿವಾದಿ Senior citizen forum ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿ ವಿಭಾಗ ಮಾಡಿಕೊಡದಿದ್ದರೆ 26 ವರ್ಷದ ನಂತರ ವಿಚ್ಚೇದನ ನೀಡುತ್ತಾರೆ ಎಂದು ಒತ್ತಡ ತರುತ್ತಿದ್ದರು ಎಂದು ತಮ್ಮ ಅರ್ಜಿಯ ಖಂಡಿಕೆ 7 ಮತ್ತು 8 ರಲ್ಲಿ ತಿಳಿಸಿದ್ದಾರೆ ಎಂದರೆ ಅದು ಅವರ ಹೇಳಿಕೆ ಅಲ್ಲ ಬೇರೆಯವರು ಆ ರೀತಿ ಬರೆಸಿದ್ದಾರೆ. ಅದು ಬೇರೆಯವರ ಹೇಳಿಕೆ ಎಂದು ನೀವು ಆ ಪ್ರಕರಣದಲ್ಲಿ ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಇರಬಹುದು ಮರೆತ್ತಿದ್ದೇನೆ. ಆ ರೀತಿ ಯಾವುದೇ ವಿಚಾರಗಳನ್ನು ಹೇಳಿಲ್ಲದೇ ಇದ್ದರೂ ಈಗ ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ 3 ನ್ನು ನಾನು ಸಂಪೂರ್ಣವಾಗಿ ನೋಡಿದ್ದೇನೆ. ನಿ.ಡಿ 3 ರ ಪುಟ ಸಂಖ್ಯೆ 1 ರಿಂದ 12 ರವರಗೆ 1ನೇ ಪ್ರತಿವಾದಿ ಹಾಗೂ 3ನೇ ಪ್ರತಿವಾದಿಗಳ ಸಹಿ ಮಾತ್ರ ಇದೆ ಎಂದರೆ ಹೌದು. ನಿ.ಡಿ 3 ರ ಪುಟಸಂಖ್ಯೆ 13 ರಲ್ಲಿ ಸಾಕ್ಷಿಗಳು ಎಂದು ಹೇಳಿ 7 ಜನರ ಸಹಿ ಇದೆ ಎಂದರೆ ಹೌದು.

11. ಹೆಂಡತಿ, ಮಕ್ಕಳು ಹಾಗೂ ಮೊಮಕ್ಕಳ ಸಹಿ ಇದೆ. ಯಾವುದೇ ದಾಖಲೆಗೆ ಬರೆದುಕೊಟ್ಟವರು ನನ್ನ ಮುಂದೆ ಸಹಿ ಮಾಡಿದ್ದಾರೆ ಎಂದು ಬರೆದಿರುತ್ತಾರೆ ಎಂದರೆ ಹೌದು. ಅದೇ ರೀತಿ ದಾಖಲೆಗಳಲ್ಲಿ ಏನು ಬರೆದಿದೆ ಎಂಬ ಮಾಹಿತಿ ಸಾಕ್ಷಿದಾರರಿಗೆ ಇರುವ ಅವಶ್ಯಕತೆ ಇರುವುದಿಲ್ಲ ಎಂದರೆ ಸುಳ್ಳು.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)